ಕುಂ.ವೀರಭದ್ರಪ್ಪ ಅವರ ಕಥನಗಳಲ್ಲಿ ಪ್ರಾದೇಶಿಕತೆ

ರವಿ ಬಸವರಾಜ ಸಣಕಂಬಿ

ಕುಂ.ವೀ. ಅವರ ಕಥೆಗಳನ್ನು ವೀರಭದ್ರ ಅವರ ಕಥೆಗಳಿಗೆ ಹೋಲಿಸುವುದಾದರೆ ಈ ಕಥೆಗಳಲ್ಲಿ ವ್ಯಕ್ತಗೊಳ್ಳುವ ಪ್ರಾದೇಶಿಕತೆಗೂ ವೀರಭದ್ರ ಅವರ ಕಥೆಗಳಲ್ಲಿ ಬಿಂಬಿತವಾದ ಪ್ರಾದೇಶಿಕತೆಗೂ ಅಜಗಜಾಂತರ ವ್ಯತ್ಯಾಸವಿದೆ. ಅತೀ ರಂಜಿತವಾದ ಮತ್ತು ತಾನೇನೋ ಅಕ್ಷರ ಜಗತ್ತಿಗೆ ಅದ್ಭುತವಾದುದೇನನ್ನೋ ನಿಗೂಢವಾದುದೇನನ್ನು ಹೇಳುತ್ತಿದ್ದೇನೆನ್ನುವ ಉತ್ಸುಕತೆಯ ನಿಲುವಿದೆ. ಕರ್ನಾಟಕದ ಬೇರೆಡೆ ಎಲ್ಲಿಯೂ ಇಲ್ಲದ, ಅಥವಾ ದೇಶದಲ್ಲಿ ಇನ್ನೆಲ್ಲೂ ಇಲ್ಲದ ಸಂಗತಿಗಳನ್ನು ತಾನು ಹೇಳುತ್ತಿರುವೆ ನೆಂದು ಅದನ್ನು ಓದುಗರು ಅರ್ಥಮಾಡಿಕೊಳ್ಳಬೇಕೆಂಬ ನಿಲುವಿದೆ. ಇದು ಸೃಜನಶೀಲ ಲೇಖಕನೊಬ್ಬನ ಪ್ರಾಮಾಣಿಕತೆಯ ನಿಲುವಿನಿಂದ ಬಂದದ್ದಲ್ಲ. ಅಲ್ಲದೆ ಎಲ್ಲಾ ಸೃಷ್ಟಿಶೀಲತೆಗೂ ಪ್ರಾಣರೂಪವಾದ ನೈತಿಕ ಎಚ್ಚರ ಇಲ್ಲಿ ಕಾಣೆಯಾಗಿರುವುದು ಗಮನಿಸತಕ್ಕ ಅಂಶವಾಗಿದೆ.

ದೇವರ ಹೆಣ

ಈ ಕಥೆಯ ಮೂಲ ಆಶಯ ಹಸಿವಿನ ವಿರುದ್ಧದ ಪ್ರತಿಭಟನೆಯಾಗಿದೆ. ‘‘ಇದಕ್ಕೂ ಮೊದಲು ಒಂದು ದಿನ ಟೊಣ್ಣಿ ಅನ್ನ ಎಂಬ ಶಬ್ದ ಕಿವಿಗೆ ಬೀಳುತ್ತಲೆ ಹ್ಹಾ ಹ್ಹಾ ಅಂತ ನಕ್ಕು ಬಿಟ್ಟಿದ್ದನು. ಒಂದು ಹನಿ ಮಳೆಮಳೆ ಕಾಣದೆ, ಇಡೀ ನೆಲ ಎಂಬೋ ನೆಲ ಕೆಟ್ಟದಾಗಿ ಹಸಿದ ಹೊಟ್ಟೆಯಂತಾಗಿ ಹುರಿ ಹುರಿ ಆಯ ತೊಡಗಿತ್ತು. ಮುಳ್ಳಿನ ಗಿಡಗಳಲ್ಲಿ ಕೇವಲ ಮುಳ್ಳುಗಳಷ್ಟೇ ಹಚ್ಚಗಿದ್ದವು. ಅವನ ಜೇಬಿನಲ್ಲಿ ಒಂದು ಇಡಿ ಹೊಗೆಸೊಪ್ಪು ಇತ್ತು. ಅದಕ್ಕೊಂದು ಎಕ್ಕೆ ಎಲೆ ಸಿಕ್ಕರೆ ಸಾಕೆಂದು ಚಂಡಿ ಹಿಡಿದವನಂತೆ ಮುಖವನ್ನು ವಿಚಿತ್ರವಾಗಿ ಬಿಗಿದುಕೊಂಡಿದ್ದ. ಹಾಗೆ ಬಿಗಿದುಕೊಂಡೇ ಹುಲುಲಿ ಹಳ್ಳದ ಗುಂಟ ಎರಡು ದಮ್ಮು ನಡೆದುಬಿಟ್ಟರೆ ಸಾಕಿತ್ತು. ಒಟ್ಟಾಗಿರುವ ಬಂದಳಿಗೆ ಗಿಡಗಳ ಪಕ್ಕದಲ್ಲಿಯೇ ಎಕ್ಕಿ ಗಿಡವೊಂದಿರುವುದು. ಶಿವನ ಮೂರನೇ ಕಣ್ಣಿನಾಕಾರದ ಆ ಎಲೆಗಳು ಅದರ ತುಂಬಾ ಇರುವವು. ಅವು ಬಿರುಬಿಸಿಲನ್ನು ಅಣಕಿಸುತ್ತಿರುವ ರೀತಿಯಲ್ಲಿ ಸಣ್ಣಗಾಳಿಗೆ ಮಿಸುಕಾಡುತ್ತಿರುವವು’’ ಎಂದು ಹೇಳುವಲ್ಲಿ ಟೊಣ್ಣಿಯ ಹಸಿವನ್ನು ಮತ್ತು ಬರಗಾಲದ ಪರಿಸರವನ್ನು ಹೇಳಲು ಪ್ರಯತ್ನಿಸಲಾಗಿದೆ.

ಜೇಬೊಳಗಿನ ಹಿಡಿಯಷ್ಟು ಹೊಗೆ ಸೊಪ್ಪಿಗೆ ಬೇಕಾದ ಎಕ್ಕಿ ಎಲೆಯ ಯೋಚನೆಯಲ್ಲಿ ಅವನು ಹೊಸ್ತಿಲು ದಾಟುತ್ತಲೇ ವಟವಟಗುಟ್ಟುತ್ತಾ ಹೆಂಡತಿ ಎದುರಾದಳು. ಆತನ ಹಿರಿಯ ಮಗ ಇಲಿಯೊಂದನ್ನು ಸುಟ್ಟು ತಿಂದು ಮುಖದ ತುಂಬಾ ನಳನಳಿಸುವ ಕಳೆ ತುಂಬಿಕೊಂಡಿದ್ದನೆಂದು ಲೇಖಕರು ವಿವರಿಸುತ್ತಾರೆ. ಕೆಲವು ಸಮುದಾಯಗಳಲ್ಲಿ ಈ ಪ್ರದೇಶದಲ್ಲಿ ಚಿಟ್ಟಿಲಿ ಅಥವಾ ಕೆಂಪು ಬಣ್ಣದ ಇಲಿಯನ್ನು ಸುಟ್ಟು ತಿನ್ನುವ ಪದ್ಧತಿ ಇದೆ. ಆದರೆ ಮನೆ ಸುತ್ತಮುತ್ತಲಿನ ಇಲಿಯನ್ನು ತಿನ್ನುವುದಿಲ್ಲ. ಆದರೆ ಯಾವ ಇಲಿಯೊಂಬುದನ್ನು ಲೇಖಕರು ಸ್ಪಷ್ಟಪಡಿಸಲು ಸಹ ಹೋಗಿಲ್ಲ. ಬಹುಶಃ ಸೋಮಾಲಿಯ ತರಹದ ಕ್ಷಮವೊಂದು ಲೇಖಕರ ದೃಷ್ಟಿಯಲ್ಲಿ ಇದ್ದಿರಬಹುದು! ಹಾಗೆ ಜೇಬಲ್ಲಿರುವ ಇಡಿಯಷ್ಟು ತಂಬಾಕಿಗೆ ಎಕ್ಕೆ ಎಲೆ ಅರಸುತ್ತಾ ಹೊರಟವನಿಗೆ ಹೊಸ್ತಿಲು ದಾಟುವುದರೊಳಗೆ ಕಂಡಿದ್ದನ್ನು ಅವಗಾಹನೆಗೆ ತಂದು ಕೊಳ್ಳುತ್ತಾನೆ. ಇದು ಲೇಖಕರ ನಿರೂಪಣಾ ಕ್ರಮವೂ ಹೌದು. ಇಲಿಯನ್ನು ತಿಂದು ನಳನಳಿಸುತ್ತಿದ್ದ ಮುಖದ ಹಿರಿಮಗ ತನ್ನ ಟೆರಿಕಾಟ್ ಅಂಗಿಯ ಹತ್ತಾರು ಸಂಧಿಗಳಲ್ಲಿ ನಿಗೂಢವಾಗಿ ಅಡಗಿರಬಹುದಾದ ನುಸಿ ಕ್ರಿಮಿಗಳನ್ನು ಆಯುವುದರಲ್ಲಿ ಮಗ್ನನಾಗಿರುವುದು ಕಂಡುಬಂದಿತು. ಮತ್ತಲ್ಲಿಯೇ ಅಪಾರಿ, ತಿಮ್ಮಿ, ಕುಲ್ಡಿ, ಊಟ ಮಾಡುವ ಆಟ ಆಡುತ್ತಿದ್ದುದು ಕಣ್ಣಿಗೆ ಬಿತ್ತು. ಆ ಆಟದಲ್ಲಿ ತಮ್ಮನು ನವಣಕ್ಕಿಯ ಬಾನದ ಪಾಲ್ಟು ಮಾಡಿದ್ದನು. ಕುಲ್ಡಿ ಘಮಾಡಿಸುವ ಸಾರಿನ ಪಾಲ್ಟು ಮಾಡಿದ್ದಳು. ಆ ಮಕ್ಕಳು ತಾವು ಮಾಡಿದ ಅಡುಗೆಯನ್ನು ಹಿತವಾಗಿ ಕಲೆಸಿ ಉಂಡಂತೆ, ಡೇಗಿದಂತೆ ಮತ್ತೆಮತ್ತೆ ನಟಿಸಿದ ಅಪಾರಿ ಎನ್ನುವ ಮಗುವಿನ ತಲೆ ಸವರಿ ಅಡುಗೆ ಮನೆ ಪ್ರವೇಶಿಸುತ್ತಾನೆ. ಬೆಕ್ಕೊಂದು ಹೊಲೆಯಲ್ಲಿ ಪವಾಡಿಸಿರುವುದನ್ನು ಹೇಳುತ್ತಾ ಪರಮೆಂಟು ಗೂಡೆಂಬ ರೀತಿಯಲ್ಲಿ ಪವಡಿಸಿದ್ದ. ಬೆಕ್ಕೊಂದು ಹೇಳುವಲ್ಲಿ ಬಹು ದಿನಗಳಿಂದ ಹೊಲೆಗೆ ಬೆಂಕಿ ಹಾಕಿಲ್ಲವೆಂದು ಹೇಳುವ ಇರಾದೆ ಇದೆ. ಅಲ್ಲಿಯೇ ಮೂಲೆಯೊಂದರಲ್ಲಿ ಮಲಗಿದ್ದ ಹುಲಿ ಹೆಸರಿನ ನಾಯಿ ಬೇಟೆಯ ಕನಸು ಕಾಣುತ್ತಿತ್ತೆಂದು ಹೇಳಲಾಗಿದೆ. ಅಡಿಗೆಯ ಮನೆಯಲ್ಲಿಯ ಅರಕಲ ಗಡಿಗೆಗಳನ್ನು ಪರಿಶೀಲಿಸಿ ಬಂದವನಿಗೆ ತನ್ನ ಚಪ್ಪಲಿಗಳ ನೆನಪಾಗುತ್ತದೆ. ಅವುಗಳಲ್ಲಿ ಒಂದನ್ನು ನಾಯಿಯೊಂದು ಹೊತ್ತೊಯ್ದು ಮಾರೆಮ್ಮನ ಗುಡಿಯ ಗರ್ಭಗುಡಿಯಲ್ಲಿ ಕುಳಿತು ಅದನ್ನು ಜಗಿದು ತಿಂದಿತೆಂದು ವಿವರಿಸಲಾಗಿದೆ. ಇಲ್ಲಿಯೂ ಸಹ ಹಸಿವಿನ ತೀವ್ರತೆಯನ್ನು ಹೇಳುವ ಸೂಚನೆಯಿದೆ. ಹಾಗೆ ಎಕ್ಕೆ ಎಲೆ ಅರಸುತ್ತಾ ಹೊರಟವನಿಗೆ ದಾರಿಯಲ್ಲಿನ ಬಸಂದೇವ್ರ ಗುಡಿಯಲ್ಲಿ ತಾತನೊಬ್ಬ ಇನ್ನೆಂಟು ದಿನಗಳಲ್ಲಿ ಮಳೆ ಬಾರದಿದ್ದರೆ ಸಾಯುವುದಾಗಿ ಕಳೆಬರದಂತೆ ಕೂತಿದ್ದ ವಿವರಣೆಯು ಸಹ ಒಟ್ಟಾರೆ ಕಥೆಯ ನಿರೂಪಣೆಯ ಕ್ರಮದಲ್ಲಿ ಹಸಿವಿನ ತೀವ್ರತೆಯನ್ನು ಹೇಳುವಲ್ಲಿ ಪರಿಣಾಮಕಾರಿ ಯಾಗಿದೆ. ಟೊಣ್ಣಿಗೆ ಎಲ್ಲರಿಗಿಂತ ಮೊದಲೇ ತಾತ ಸಾಯುವುದೇ ಎಂದು ಸಂದೇಹ ಬಂದೊಡನೆ ಸಣ್ಣನಗು ಬಂತು. ಹಾಗೆ ಮುಗುಳು ನಗೆ ತುಂಬಿಕೊಂಡು ಗೋಲಿಯಂತೆ ಉರುಳಿ ಉರುಳಿ ಹುಲಿಲಿ ಹಳ್ಳದ ದಡ ಸೇರಿದನೆಂಬುದಾಗಿ ಲೇಖಕರು ವಿವರಿಸುತ್ತಾರೆ.

ಅಲ್ಲಿ ಎಕ್ಕೆ ಗಿಡದ ಎಲೆ ತೆಗೆದುಕೊಂಡು ಚಿಲುಮೆ ಮಾಡಿಕೊಂಡು ಹೊಗೆ ಸೇದಲು ಬೆಂಕಿಪೊಟ್ಟಣಕ್ಕೆ ಹುಡುಕಿದರೆ ಪೊಟ್ಟಣ ತರುವುದನ್ನು ಮರೆತು ಬಂದಿದ್ದನು. ಬೆಂಕಿ ಪೊಟ್ಟಣಕ್ಕೆ ಬಂಡಿ ದಾರಿಯಲ್ಲಿ ಕಾದು ದೊರೆತ ಒಂದೇ ಒಂದು ಕಡ್ಡಿಯಿಂದ ಹೊಗೆ ಸೇದುತ್ತಾ ಅದರ ಮತ್ತಿನಿಂದ ತರಗಲೆಯಂತೆ ನಡೆಯತೊಡಗಿದ. ಹಾಗೆ ಭ್ರಾಮಕ ಸ್ಥಿತಿಯಲ್ಲಿದ್ದಾಗ ತನ್ನ ತಲೆಯೊಳಗೆ ಎಂಥದೊ

ಪ್ರಾಣಿ ಬೆಳೆಯುತ್ತಿದೆ ಎನ್ನುವ ಭಾವನೆ ಅವನಿಗೆ ಉಂಟಾಯಿತು. ಅದರ ತಲೆ, ತಿಕ ಸ್ಪಷ್ಟವಾಗದಿದ್ದಾಗ ಮತ್ತೊಂದು ದಮ್ಮು ಹೊಗೆ ಎಳೆಯಬೇಕಾಯಿತು ಎಂದು ಲೇಖಕರು ವಿವರಿಸುತ್ತಾರೆ. ''ಆ ಕ್ಷಣದ, ಆ ಧೂಮದ ಉದ್ದೀಪನಕ್ಕೆ ಸಿಕ್ಕು ಮೆದುಳು ಗರಿಗೆದರಿದ ಹಕ್ಕಿಯಂತಾಗುತ್ತಲೆ ಅದು ವೃಷಭ ಜಾತಿಗೆ ಸೇರಿದ್ದೆಂದು ಮತ್ತಷ್ಟು ಸ್ಪಷ್ಟವಾಯಿತು. ನೆನಪಿನ ಪದರುಗಳಲ್ಲಿ ಆಕಾರ ನಿಚ್ಚಳವಾಗಿ ರೂಪುಗೊಳ್ಳತೊಡಗುತ್ತದೆ. ಅಲಲಲೇ ಸಾರದಿ ನಾನುದಾರೆಂದರೆ ಎಂದು ತನ್ನ ತನ್ನನ್ನು ಕವುಚಿಕೊಂಡಿರುವ ದಾರಿದ್ರ್ಯವನ್ನು ಹೊಡೆದೋಡಿಸಲೆಂದೇ ತನ್ನ ಮಂದೇವರಾದ ಉರುಕುಂದಿ ಈರಣ್ಣನೇ ತನ್ನೊಕ್ಕಲ ಮನೆಯ ಭಾರಿ ಎತ್ತಿಗೆ ಗುಣವಾಗದಂಥ ರೋಗ ಬರಿಸಿರುವರು ಎಂದುಕೊಂಡು ದೇವರ ದಿಕ್ಕಿನ ಕಡೆ ಕೈ ಮುಗಿದು ದೇವರೇ ನೀನು ದೊಡ್ಡೋನು ಎಂದುಕೊಂಡನು. ಆ ಎತ್ತಿನ ದೇಹದಲ್ಲಿರಬಹುದಾದ ಕೊಬ್ಬಿನಿಂದ ಕೂಡಿರುವಂತಹ ಮಾಂಸ ರೋಗಕ್ಕೆ ಬಲಿಯಾಗದರಿಲೆಂದು ಮತ್ತೊಮ್ಮೆ ಮಂದೇವರಿಗೆ ಬೇಡಿಕೊಂಡನು'' ಎಂದು ಸಾಯಲಿರುವ ಎತ್ತಿನ ಕುರಿತು ಕನಸು ಕಾಣುತ್ತಾನೆ.

ಹಾಗೇ ಯೋಚಿಸುತ್ತಾ ಎತ್ತು ಸತ್ತಿದ್ದರೆ ಶಿವಪೂಜೆಯ ಗೌಡರು ಅವರ ಮನೆಯ ಒಕ್ಕಲಾದ ತನ್ನ ದಾರಿಯನ್ನು ನೋಡುತ್ತಿರಬಹುದೆಂದುಕೊಂಡ ಹಾಗೆಯೇ ಬರುತ್ತಿರುವಾಗ ಕರಗಲ್ಲು ಕಂಡಿತು. ಆ ಕರಗಲ್ಲಿನ ಮೇಲಿನ ಎಣ್ಣೆಯನ್ನು ನಾಯಿಯೊಂದು ನೆಕ್ಕುತ್ತಿತ್ತು. ಅದನ್ನು ಗಮನಿಸಿದ ಟೊಣ್ಣಿ ''ಕರಗಲ್ಲು ಬೇರೆ ಅಲ್ಲ, ಪರಮೇಶ್ವರನ ನೆತ್ತಿ ಬೇರೆ ಅಲ್ಲ ಎಂದು ತಿಳಿದವನಾದ ಟೊಣ್ಣಿಗೆ ಬಂತು. ಅಚಾ ಎಂದು ಗದರಿಸಿದ ಎಣ್ಣೆಗೆ ಹಲ್ಲತ್ತಿದ್ದ ಅದು ಕೇರ್ ಮಾಡದೆ ಗರ್ ಅಂತು. ಐನೋರು ನಾಯಿ ತಡವೋದು ಇಷ್ಟವಿರಲಿಲ್ಲ. ಲಕ್ಷಣ ಕಳೆದುಕೊಳ್ಳುವುದು ಇಷ್ಟವಿರಲಿಲ್ಲ ಮುದುಕನ ಕಟ್ಟೆಯಲ್ಲಿ ಎತ್ತುಕೊಯ್ಯುವಾಗ ಜೊಲ್ಲು ಸುರಿಸುತ್ತಾ ಅದು ಬಂದಾಗ ತಾನು ತಪ್ಪದೇ ಅದರ ಕಾಲು ಮುರಿದು ಕುಂಟುತ್ತಾ ಹೋಗುವುದನ್ನು ನೋಡಿ ನಗಬೇಕೆಂದು ನಿಶ್ಚಯಿಸಿದನು.'' ಇಲ್ಲಿಯೂ ಸಹ ಹಸಿವಿನ ತೀವ್ರತೆಯನ್ನು ಸ್ಪಷ್ಟಪಡಿಸಲು ಯತ್ನಿಸಲಾಗಿದೆ. ಹಾಗೇ ಯೋಚಿಸುತ್ತಾ ಬಂದವನು ಗೌಡರ ಮನೆಯ ಕಡೆ ನಡೆಯ ತೊಡಗಿದನು. ದಾರಿಯಲ್ಲಿ ಬೇವಿನ ಮರದ ಕೆಳಗೆ ಕುಳಿತಿರುವ ಕಟುಕರ ದಯಾನಂದನನ್ನು 'ಎಪ್ಪೋ ತಗುಲಿನ ರೇಟು ಎಂಗೈತಿ' ಎಂದು ಕೇಳುತ್ತಾನೆ. ಹಾಗೆ ಅವನ ಹತ್ತಿರ ಅಡ್ವಾನ್ಸ್ ತೆಗೆದುಕೊಳ್ಳಲು ಟೊಣ್ಣಿ ಪ್ರಯತ್ನಿಸಿದನಾದರೂ ಅದು ಸಾಧ್ಯವಾಗದೇ ಹೋಯಿತು. ಹಾಗೆ ಗೌಡರ ಮನೆಗೆ ಅಂಗಳಕ್ಕೆ ಬಂದಾಗ 'ಗೌಡರ ದೇಹ ಬಾಗಿಲಾಚೆ ಇದ್ದಿತು. ಆತನ ಸುತ್ತಮುತ್ತ ಮತ್ತೆ ಕೆಲವರಿರುವುದು ಕಂಡಿತು. ಅವರ ಮಾತಿನ ವಸ್ತು ಎತ್ತೇ ಆಗಿರುವುದು, ಆ ಮಾತುಗಳನ್ನು ಆಲಿಸಿ ತನ್ನ ಪುಣ್ಯಕ್ಕೆ ಎತ್ತು ಸತ್ತಿದೆ ಎಂದು ರೋಮಾಂಚನಗೊಂಡನು. ಎತ್ತಿನ ಕಳೇಬರವನ್ನು ಮುದುಕನ ಕಟ್ಟವರೆಗೆ ಸಾಗಿಸಲು ತಾನು ಯಾರ, ಯಾರ ಸಹಾಯ ಪಡೆಯಬಹುದೆಂದು ಅವನು ಲೆಕ್ಕ ಹಾಕುತ್ತಿರುವಷ್ಟರಲ್ಲಿ ಗೌಡರು ಹಾಗೇ ನಡೆಯುತ್ತಾ ಹೊರಗೆ ಬಂದೇಬಿಟ್ಟರು. ಬಂದವರೇ ಏನ್ಲೇ ಅಂತ ಮಾತಾಡಿಸಿಯೇ ಬಿಟ್ಟರು.' ಸತ್ತ ಎತ್ತನ್ನು ದೇವರ ಸಮಾನವಾದ್ದರಿಂದ ಅದು ಗೌಡರ ಪ್ರೀತಿಯ ಮನೆಯ ಎತ್ತಾದ್ದರಿಂದ ಅದನ್ನು ಹೂಳಬೇಕೆಂದು ನಿರ್ಧರಿಸುವುದು ಗೌಡರಿಂದ ತಿಳಿದುಬಂದ ಟೊಣ್ಣಿಗೆ ಜಂಗಾಬಲವೇ ಉಡುಗಿದಂತಾಯಿತು. ಅಲ್ಲಿಗೂ ಟೊಣ್ಣಿ ಪಟ್ಟುಬಿಡದೆ 'ನಿಮ್ಮಂತೋರೇ ಇಂಥ ಮಾತಂದರೆ ಎಂಗ್ರಿ ಧಣಿ... ನಾವು ಹೆಣತಿಂದು ಬದುಕೋ ಮಂದಿ... ದ್ಯಾವ್ರಾ ಹೆಣಕೊಡಿ ಕೊಯ್ದು ತಿಂದು ಬದಿಕಂತೀವಿ ಎಂದು ಮನಸ್ಸಿನ ಮಾತುಗಳನ್ನು ಕಿತ್ತಿಟ್ಟನು. ಮೊದಲೇ ಹುಲಿಯಂಥ ಎತ್ತು ಸತ್ತ ಚಿಂತೆಯಲ್ಲಿದ್ದ ಗೌಡ ಹೋಗ ಹೋಗಲೇ ಅಂತ ಗದರಿಸಿಬಿಟ್ಟರು. ಎರಡು ಹೆಜ್ಜೆ ಸರಿದು ಟೊಣ್ಣಿ ತಿನ್ನೋರ್ಲೇ ಇಂಗಂದ್ರೆ ಮನಿ ಮಾದಿಗ್ರು... ನಾವೆತ್ಲಾಗ ಹೋಗಬೇಕು ಧಣಿ. ನಿಮ್ಮಂಬ್ಲು ತಿನ್ನೋ ಆಕ್ಕೈತಿ ಕೇಳ್ತೀವಿ... ಓಗ್ಲಿ.... ನಿಂ ಪಾದಕ್ಕೆ ಒಂದ್ಜೆತಿ ಚಮ್ಡಾ ಮಾಡ್ಕೊಡ್ತೀತಿ... ದೇವ್ರ ಎಣ ಕ್ವಡ್ರಿ' ಎಂದು ಅಂಗಲಾಚುತ್ತಾನೆ. ಆದರೆ ಗೌಡರು ಅವನನ್ನು ಗದರಿಸಿ ಕಳಿಸುತ್ತಾರೆ.

ಇದಾದ ನಂತರ ಸಕಲ ಗೌರವ ಪೂಜೆ ಪುನಸ್ಕಾರಗಳಿಂದ ಎತ್ತನ್ನು ಮೆರವಣಿಗೆಯ ಮೂಲಕ ಕೊಂಡೊಯ್ದು ಹೂಳಲಾಗುತ್ತದೆ. ಮೆರವಣಿಗೆಯ ಸಂದರ್ಭದಲ್ಲಿ ಟೊಣ್ಣಿ ಕುಡಿದು ಹೋಗಿ ಪ್ರತಿಭಟಿಸುತ್ತಾನೆ. ಆದರೆ ಗೌಡನ ಆಳುಗಳು ಅವನು ಕುಡಿದದ್ದನ್ನು ಕಕ್ಕುವಂತೆ ಹೊಡೆಯುತ್ತಾರೆ. ಅದಾದನಂತರ ಸಂಜೆ ಟೊಣ್ಣಿ ತುಕ್ಕಿಡಿದು ಮೂಲೆ ಸೇರಿದ್ದ ಮಚ್ಚನ್ನು ಮಸೆದು ಅಣಿಯಾಗುತ್ತಾನೆ.

ಮುಂದೆ ಮುಂದೆ ಟೊಣ್ಣಿ

ಹಿಂದೆ ಹಿಂದೆ ಹುಲಿ

ಮಣ್ಣಿನೊಳಗಿರುವ ದೇವರ ಹೆಣ ಕೊಳೆತಿರಲಿಕ್ಕಿಲ್ಲ, ತೊಗಲು ಇಸ್ತ್ರಿ ಮಾಡಿದ ಅಂಗಿಯಂತಿರಬಹುದು. ಎಲ್ಲದಕ್ಕಿಂತ ಹೆಚ್ಚಾಗಿ ತನ್ನ ಇಚ್ಛಾಶಕ್ತಿಯೇ ಮಣ್ಣಿನೊಳಗೆ ಕೊಳೆಯುತ್ತಿದೆಯೋ ಎಂಬಂತೆ ಯೋಚಿಸುತ್ತ ಊರ ಮಗ್ಗುಲಾಗಿರುವ ಸಿಂದಗೌಡರ ಕಟ್ಟೆ ಹೊಲ ಸೇರಿದ. ಮೇರೆ ಮೇಲೆ ನಿಂತು ಕಣ್ಣಾಡಿಸಿದ. ಎಲ್ಲೂ ನರಹುಳದ ಸುಳಿವಿರಲಿಲ್ಲ. ಅಲ್ಲಲ್ಲಿ ಕಪ್ಪಲಿನಾಟಗಳ ಊಳಿಡುವ ಸದ್ದು ಬಿಟ್ಟರೆ ಜೀರುಂಡೆಗಳ ಸದ್ದಷ್ಟೇ ಇದ್ದಿತು.

ಜೇನ್ನೊಣವೊಂದು ಹೂವರಿಸಿಕೊಂಡು ಹೋಗುವ ರೀತಿಯಲ್ಲಿ ಟೊಣ್ಣಿ ಅಡ್ಡಾಡತೊಡಗಿದ. ಸ್ವಲ್ಪೇ ವ್ಯಾಳ್ಯದೊಳಗೆ ದೇವರಿರುವ ಗುದ್ದನ್ನು ಕಂಡು ಹಿಡಿದು ಬಿಟ್ಟನು. ಗುದ್ದಿನ ಮೇಲಿದ್ದ ಇಬತ್ತಿ ಉಂಡೆ, ಕಣಗಿಲೆ ಹೂವುಗಳು ಅವನ ಸಲಿಕೆ ಏಟುಗಳಿಗೆ ತತ್ತರಿಸಿ ಹೋದವು. ಮೈಯೊಳಗೆ ದೆವ್ವ ಹೊಕ್ಕಂಡವನಂತೆ ತೋಡಿ ದೇವರ ಹೆಣ ತಲುಪಿದನು. ದೇವರ ಹೆಣದ ಮೂಲೆ ಮೂಲೆಲೆ ಮೂಸಿ ಗೆಲುವಾದನು. ದೇವರು ಬದುಕಿರುವ ರೀತಿಯಲ್ಲಿಯೇ ಬೆಚ್ಚಗಿರುವುದು, ಸರಿ. ಅವನು ಮಿಂಚಿನಂತೆ, ಚಕ ಚಕ ಅಂತ ದೇವರ ಹೆಣವನ್ನು ಕೊಯ್ಯತೊಡಗಿದನು. ಸ್ವಲ್ಪೇ ಹೊತ್ತಿನಲ್ಲಿ ಕೊಯ್ದು ಕಣ್ಣೆ ಕಣ್ಣೆ ಮಾಂಸವನ್ನು ಪುಟ್ಟಿಗೆ ತುಂಬಿ ಹಸಿತೊಗಲನ್ನು ಮಡಚಿ ಹೊತ್ತು ಕೊಂಡನು. ಉಳಿದ ದೇವರನ್ನು ತಿನ್ನಲು ಹುಲಿರಾಯನ ಸುಪರ್ದಿಗೆ ಒಪ್ಪಿಸಿದನು. ನಂತರ ಭಲೆ ಸರ್ದಾರ ಎಂಬ ರೀತಿಯಲ್ಲಿ ಮನೆ ಕಡೆ ಹೆಜ್ಜೆ ಹಾಕಿದನು.

ಮರುದಿನ ಬೆಳಗಿನ ಜಾವವೇ ಎತ್ತಿನ ಚರ್ಮವನ್ನು ಚೀಲದಲ್ಲಿ ಸುತ್ತಿಕೊಂಡು ಕಟುಕರ ದಯಾನಂದನ ಹತ್ತಿರ ಹೋದಾಗ ಅವನು ಇರು ದುಡ್ಡು ತರುತ್ತೇನೆಂದು ಹೋಗಿ ಗೌಡರಿಗೆ ವಿಷಯ ತಿಳಿಸಿ ಗೌಡರ ಮಗನನ್ನು ರೂಢಿಸಿಕೊಂಡವನಾಗಿರುತ್ತಾನೆ ಆಳುಗಳ ಸಹಾಯದಿಂದ ಅವನನ್ನು ಗೌಡರ ಮನೆಯ ಹತ್ತಿರ ತಂದು ಅವನನ್ನು ಗೌಡರ ಮನೆಯ ಮುಂದೆ ತಂದು ನಿಲ್ಲಿಸಲಾಯಿತು. ರೊಣ್ಣಿಯ ಮಕ್ಕಳು ಮರಿ ಸಮೇತ ಇಡೀ ಸಂಸಾರವೇ ಅಳುತ್ತಾ ಗೌಡರ ಮನೆಯ ಮುಂದೆ ಸೇರಿದರು. ಪೊಲೀಸರನ್ನು ಕರೆಕಳುಹಿಸಲಾಯಿತು. ಸ್ವಲ್ಪ ಹೊತ್ತಿನ ನಂತರ ಪೊಲೀಸರಿದ್ದ ಜೀಪು ಧೂಳೆಬ್ಬಿಸಿಕೊಂಡು ಬಂದದ್ದೆ ಗಚ್ಚಿನ ಮನೆ ಅಂಗಳದಲ್ಲಿ ಡರ್ ಡಸಕ್ಕಂತ ನಿಂತಿತು. ಆ ಜೀಪಿನಿಂದ ಪೊಲೀಸರಿಬ್ಬರ ಜೊತೆ ಸಬ್ ಇನ್ಸ್‌ಪೆಕ್ಟರ್ ಊರಿಗೆ ಊರೇ ಉಸಿರುಗಟ್ಟುವಂತೆ ಇಳಿದರು. ಗೌಡರು ಖಾಕಿ ಮಂದಿಯನ್ನು ಸ್ವಾಗತಿಸಿ ಕಟ್ಟೆಮೇಲೆ ಕುಂಡ್ರಿಸಿದರು. ಆ ಕ್ಷಣ ಅವರೆಲ್ಲರ ಕರ್ಣಪಟಲ ಹರಿವಂತೆ ರೊಣ್ಣಿಯ ಕುಟುಂಬ ಸದಸ್ಯರು ಅಯ್ಯೋ ಅಂತ ಎದೆ ಎದೆ ಬಡಿದುಕೊಂಡು ಅಳಲು ಪ್ರಾರಂಭಿಸಿದರು ಮತ್ತು ಪೊಲೀಸರೇ ಅವರನ್ನೆಲ್ಲಾ ಗದರಿಸಿ ಕಳುಹಿಸಬೇಕಾಯಿತು.’ ಬಡಕಲಾಗಿದ್ದ ರೊಣ್ಣಿಯನ್ನು ಪೊಲೀಸರಿಗೆ ಏನೂ ಮಾಡಿಕೊಳ್ಳಲಾಗಲಿಲ್ಲ. ರೊಣ್ಣಿಯೇ ಪೊಲೀಸರಿಗೆ ತನ್ನನ್ನು ಬಂಧಿಸಿ ಜೈಲಿಗೆ ಕರೆದೊಯ್ಯುವಂತೆ ಆಹ್ವಾನಿಸುತ್ತಾನೆ. ಇದರಿಂದ ಗೌಡ ಇವನು ಪೊಲೀಸ್ ಠಾಣೆಗೆ ಮತ್ತು ಜೈಲಿಗೆ ಹೆದರುವುದಿಲ್ಲವೆಂದು ಗ್ರಹಿಸಿ ಅಧೀರರಾಗುತ್ತಾರೆ. ಕಡೆಗೆ ಅವನಿಗೆ ಹೊಡೆದಾದರೂ ಬುದ್ಧಿ ಹೇಳಿ ಎಂದು ಗೌಡರು ಕೇಳಿಕೊಂಡಾಗ ಸಬ್ ಇನ್ಸ್‌ಪೆಕ್ಟರ್ ಲಾಠಿ ಹಿಡಿದು ಹತ್ತಿರ ಹೋಗಿ ಅವನನ್ನು ಹೊಡೆಯುವ ನೈತಿಕ ಧೈರ್ಯ ಸಾಲದೆ ಹಿಂದೆ ಸರಿಯುತ್ತಾನೆ. ಗೌಡರಿಗೆ ಏನೋ ಸಮಾಧಾನ ಹೇಳಿ ಹೊರಡಲಣಿಯಾದಾಗ ರೊಣ್ಣಿ ಮತ್ತವನ ಕುಟುಂಬ ತಮ್ಮನ್ನೂ ಕರೆದೊಯ್ಯುವಂತೆ ಜೀಪಿನ ಬೆನ್ನು ಹತ್ತುತ್ತಾರೆ ಎನ್ನುವಲ್ಲಿಗೆ ಕಥೆ ಮುಕ್ತಾಯ ಕಾಣುತ್ತದೆ.

ಈ ಕಥೆಯಲ್ಲಿ ಬರುವ ಪ್ರಾದೇಶಿಕ ಭಾಷೆ, ಶೈಲಿ, ನುಡಿಗಟ್ಟು, ವ್ಯಂಗ್ಯ ಇದೆಲ್ಲವನ್ನೂ ಒಳಗೊಂಡಂತೆ ಕುಂವೀ ಅವರ ಕಥನದ ಶೈಲಿ ಅದ್ಭುತವೆನ್ನಬಹುದಾದ ಮಟ್ಟಿಗೆ ಇದೆ. ಆದರೆ ಭಾಷೆಯೊಂದನ್ನು ಹೊರತುಪಡಿಸಿದರೆ ಕಥನದಲ್ಲಿ ಬರುವ ಪ್ರಾದೇಶಿಕ ಅಂಶಗಳು ಎಷ್ಟರಮಟ್ಟಿಗೆ ನಿಜವಾದವು ಎನ್ನುವ ಪ್ರಶ್ನೆ ಎದುರಾಗುತ್ತದೆ. ಇಲ್ಲಿ ಹಸಿವಿನ ಹಿನ್ನೆಲೆ ಕಥೆಗಾರರು ಕೊಡುವ ಕಾರಣ ವಸ್ತುವಿಗೆ ಪೂರಕವಾಗಿಲ್ಲ. ದಲಿತನೊಬ್ಬ ಸತ್ತದನಕ್ಕಾಗಿ ಸ್ವಾಭಿಮಾನ ತೊರೆದು ಹೂಳಿದ ಎತ್ತನ್ನು ತಿನ್ನುವ ಭೀಕರ ಬರಗಾಲ ಕುಂವೀ ಅವರ ಕಾಲಮಾನದಲ್ಲಿ ಯಾವ ಇಸ್ವಿಯಲ್ಲಿ ಕಾಣಿಸಿಕೊಂಡಿತ್ತು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇಂತಹ ನಿಲುವೇ ಲೇಖಕರ ಸಾಮಾಜಿಕ ಬದ್ಧತೆಯನ್ನು ಪ್ರಶ್ನಿಸುವಂತೆ ಮಾಡುತ್ತದೆ. ಕಥೆಯ ವಸ್ತುವಿನ ಆಯ್ಕೆಯಲ್ಲಿ ಮತ್ತು ತಾನು ನಂಬಿದ ಸಾಹಿತ್ಯಿಕ ಚಳವಳಿಯೊಂದರ ಸಿದ್ಧಾಂತಗಳ ಪ್ರತಿಪಾದನೆಗೆ ತಳಸಮುದಾಯಗಳ ಜೀವನವನ್ನು ಉಚಿತವಲ್ಲದ ರೀತಿಯಲ್ಲಿ ಅರ್ಥೈಸುವ ಪ್ರಕ್ರಿಯೆ ಮಾತ್ರ ಅಪಾಯಕಾರಿಯಾದುದಾಗಿದೆ. ಪ್ರಾದೇಶಿಕ ಭಾಷೆ ಮತ್ತು ನುಡಿಗಟ್ಟುಗಳನ್ನು ಒಳಗೊಂಡ ಶೈಲಿಯೊಂದಿದ್ದರೆ ಸಾಲದು, ಅದರಾಚೆಗೂ ವಸ್ತುವಿನ ಆಯ್ಕೆ ಮತ್ತು ಅದನ್ನು ನಿಭಾಯಿಸುವ ಸಾಮರ್ಥ್ಯ ಲೇಖಕರಿಗಿರಬೇಕಾಗುತ್ತದೆ.

ಕುಬುಸ

ಕುಂವೀ ಅವರ ಮತ್ತೊಂದು ವಿಶಿಷ್ಟ ವಿಭಿನ್ನ ಬಗೆಯ ಕಥಾವಸ್ತುವನ್ನುಳ್ಳ ಕಥೆ ಇದಾಗಿದೆ. ಬುಡಕಟ್ಟು ಮೂಲದ ಸಮುದಾಯವೊಂದು ನಾಗರಿಕತೆಗೆ ತೆರೆದುಕೊಳ್ಳುವ ಬಗೆಯನ್ನು ಈ ಕಥೆಯಲ್ಲಿ ನಿರೂಪಿಸಲಾಗಿದೆ. ಆದರೆ ಲೇಖಕರು ವಸ್ತುಸ್ಥಿತಿಯನ್ನು ಎಂದಿನ ತಮ್ಮ ಅತಿರಂಜಿತ ಶೈಲಿಯಲ್ಲಿಯೇ ಹೇಳುತ್ತಿದ್ದಾರೆಂದು ಅನ್ನಿಸದೇ ಇರದು. ಆದರೆ ಇತರೆ ಕಥೆಗಳಿಗಿಂತ ಕುಂವೀ ಅವರು ಈ ಕಥೆಯಲ್ಲಿ ತೋರಿಸುವ ಸಂಯಮ, ನಿರೂಪಣೆಯಲ್ಲಿನ ಅಚ್ಚುಕಟ್ಟುತನ ಪ್ರಶಂಸಾರ್ಹವಾದುದಾಗಿದೆ.

ಸಮುದಾಯವೊಂದರ ಮಗುವೊಂದು ಅಕ್ಷರ ಕಲಿತದ್ದು, ಅವನು ಬೆಂಗಳೂರಿನಂತಹ ನಗರದಲ್ಲಿ ಸರ್ಕಾರಿ ಕೆಲಸ ಪಡೆದದ್ದು ಅಲ್ಲಿ ಅವನು ಕೆಲಸ ನಿರ್ವಹಿಸುತ್ತಿದ್ದ ಬಗೆ ಮುಂತಾದ ವಿವರಗಳು ಕಥೆಯಲ್ಲಿ ತಿಳಿಹಾಸ್ಯದಿಂದ ನಿರೂಪಿತ ವಾಗಿವೆ. ನೆಟ್ಕಲ್ಲು ಎನ್ನುವ ತನ್ನ ಹೆಸರನ್ನು ಎನ್.ಕೆ.ವಡ್‌ವಟ್ ಬದಲಾಯಿಸಿಕೊಂಡ. ಹಾಗೆಯೇ ತಾನು ಪೂಜಿಸುತ್ತಿದ್ದ ಸುಂಕಲಮ್ಮ, ಕಂದಾರೆಮ್ಮನಂಥ ಶೂದ್ರದೇವತೆಗಳಿಗೆ ನಡೆದುಕೊಳ್ಳುವುದನ್ನು ಬಿಟ್ಟು ಮೇಲ್ವರ್ಗದವರು ನಡೆದುಕೊಳ್ಳುವ ದೇವತೆಗಳಿಗೆ ನಡೆದುಕೊಳ್ಳತೊಡಗಿದನು. ತನ್ನ ಭಾಷೆ ಮತ್ತು ನಂಬಿಕೆಗಳನ್ನು ಬದಲಾಯಿಸಿಕೊಳ್ಳಲು ಪ್ರಯತ್ನಿಸಿದನು. ಅವನು ಬೆಂಗಳೂರಿನಲ್ಲಿ ಕನ್ಯೆಯೊಂದನ್ನು ನೋಡಿ ಮದುವೆಯಾಗಲು ಅನುಮತಿಗಾಗಿ ಊರಿಗೆ ಒಂದು ಮುದುಕಿಯನ್ನು ಕೇಳಿದಾಗ ಆ ಮುದುಕಿಯು ಅವನು ಮದುವೆಯಾಗಲಿರುವವಳ ಫೋಟೋ ನೋಡಿ ‘ಕುಬುಸ ತೊಡೋಳ್ನ ಅದೆಂಗೋ ಮದ್ವಿ ಆಗ್ತೀಯಾ...... ಈ ಊರಂಭೋ ಊರಾಗ ಯಾವ ಯಣು ಮಗಳಾದ್ರು ಕುಬುಸ ತೊಟ್ಟಾಳೇನೋ ನೋಡು’ ಎಂದು ಕಿಡಿ ಕಿಡಿ ಕಾರಿತು. ಸಾಂಪ್ರದಾಯಿಕವಾಗಿ ಆ ಸಮುದಾಯದವರು ಉಡುಚಲಮ್ಮನ ಎನ್ನುವ ಗ್ರಾಮದೇವತೆಯ ಆರಾಧಕರಾಗಿದ್ದುದರಿಂದಲೂ ಮತ್ತು ಉಡುಚಲಮ್ಮನಗೆ ಕುಪ್ಪಸವಿರಲಿಲ್ಲವಾದ್ದರಿಂದ ಯಾರೂ ಕುಪ್ಪಸ ತೊಡುತ್ತಿರಲಿಲ್ಲ. ಅವನಿಗೆ ಊರಲ್ಲಿ ಆ ಅಜ್ಜಿಯನ್ನು ಒಪ್ಪಿಸಲಾಗದೇ ಬೆಂಗಳೂರಿನ ತನ್ನ ಮನೆಗೆ ಕರೆ ತರುವುದು, ಆ ಮುದುಕಿಯ ಬಸ್ಸಿನ ಪ್ರಯಾಣದ ಪರಿಯನ್ನು ವರ್ಣಿಸುವುದು, ಬೆಂಗಳೂರಿನಲ್ಲಿ ಆಧುನಿಕ ನಾಗರಿಕ ಜಗತ್ತಿನ ಕುತೂಹಲದ ವಸ್ತುವಾಗಿ ಆ ಮುದುಕಿಯು ಮಾರ್ಪಡುವುದು, ಅವಳಿಗೆ ಕುಪ್ಪಸ ತೊಡಲು ಪ್ರೇರೇಪಿಸುವುದು ಇವೆಲ್ಲಾ ಕಥೆಯಲ್ಲಿ ಆದ್ಯಂತವಾಗಿ ಹಾಸ್ಯ ಉಕ್ಕಿಸುವಂತಿವೆ. ಕುಂವೀಯವರು ಬುಡಕಟ್ಟು ಮೂಲಕ ಸಮುದಾಯವೊಂದು ಆಧುನಿಕತೆಗೆ ತೆರೆದುಕೊಳ್ಳುವಾಗ ಒಳಗಾಗುವ ಸಂಘರ್ಷವನ್ನು ಈ ಕಥೆಯಲ್ಲಿ ಚಿತ್ರಿಸಿದ್ದಾರೆ.

ಎಲುಬನೆಂಬ ಕೊರಚನೂ ಚವುಡನೆಂಬ ಹಂದಿಯೂ

ಕುಂವೀ ಅವರ ಈ ಕಥೆಯು ಗ್ರಾಮೀಣ ಪ್ರದೇಶದಲ್ಲಿ ಇರುವ ನಂಬಿಕೆಯೊಂದನ್ನು ಆಧರಿಸಿ ರೂಪುಗೊಂಡ ಕಥೆಯಾಗಿದೆ. ಹಂದಿಯನ್ನು ಮಹಾವಿಷ್ಣುವಿನ ಅವತಾರವೆಂದು ನಂಬಲಾಗುತ್ತದೆ. ಮನೆಗೆ ನುಗ್ಗಿದ ಹಂದಿಯನ್ನು ಅದನ್ನು ಹೊರಗೆ ಬಿಡಬಾರದೆಂತಲೂ ಅದನ್ನು ಹೊಸ್ತಿಲ ಒಳಗೆಯೇ ಹೂತು ಹಾಕಬೇಕೆಂಬ ನಂಬಿಕೆ ಈ ಪ್ರದೇಶದ ಮೇಲ್ವರ್ಗದವರಲ್ಲಿದೆ. ಅದನ್ನು ಮಹಾಲಕ್ಷ್ಮಿಯ ಪ್ರತಿರೂಪವೆಂದು ಭಾವಿಸಲಾಗುತ್ತದೆ. ಎಲುಗನೆಂಬ ಕೊರಚನ ಚವಡನೆಂಬ ಹಂದಿಯೊಂದು ರಾತ್ರಿಯ ಹೊತ್ತು ಗೌಡನ ಮನೆಗೆ ನುಗ್ಗಿದ್ದರಿಂದ ಅದನ್ನು ಹೊಡೆದು ಸಾಯಿಸಿ ಮನೆಯೊಳಗೆ ಹೂಳಲಾಗುತ್ತದೆ. ಇದಕ್ಕೆ ಪ್ರತೀಕಾರವಾಗಿ ಚವುಡ ರಾತ್ರಿಯ ಹೊತ್ತು ಗೌಡನ ನುಗ್ಗಿದ್ದರಿಂದ ಅದನ್ನು ಹೊಡೆದು ಸಾಯಿಸಿ ಮನೆಯೊಳಗೆ ಹೂಳಲಾಗುತ್ತದೆ. ಇದಕ್ಕೆ ಪ್ರತೀಕಾರವಾಗಿ ಚವುಡ ರಾತ್ರಿಯ ಹೊತ್ತು ಗೌಡನ ಮಗ ವಿರೂಪಾಕ್ಷಿಯನ್ನು ಕೊಂದು ತನ್ನ ಹಟ್ಟಿಯೊಳಗಡೆ ಹೂಳುತ್ತಾನೆ ಎನ್ನುವಲ್ಲಿಗೆ ಕಥೆ ಮುಗಿಯುತ್ತದೆ. ಯಥಾಪ್ರಕಾರ ಕುಂವೀ ಅವರ ಕಥನ ನೆಲೆ ಬಂಡಾಯವೇ ಆಗಿದೆ. ಶೋಷಿತರು ಮತ್ತು ಶೋಷಕರು ಅವರ ವಿರುದ್ಧ ಸುಪ್ತವಾಗಿ ಅಡಗಿದ್ದ ಆಕ್ರೋಶ. ಅದು ವ್ಯಕ್ತಗೊಳ್ಳುವ ಬಗೆ ಈ ರೀತಿಯಲ್ಲಿ ಸಿದ್ಧ ಸಮೀಕರಣವೊಂದಕ್ಕೆ ಹೊಂದಿಸಿ ಹೆಣೆಯಲ್ಪಟ್ಟ ಕಥೆ ಇದಾಗಿದೆ. ಇಲ್ಲಿ ಹಂದಿಯೊಂದಿಗೆ ಮನುಷ್ಯರನ್ನು ವರ್ಣಿಸಲ್ಪಡುವ ಬಗೆ ಹಸಿಹಸಿಯಾಗಿಯೇ ಇದೆ. ಪ್ರಾದೇಶಿಕ ನುಡಿಗಟ್ಟುಗಳೊಂದಿಗೆ ಕುಂವೀ ಅವರು ನಡೆಸುವ ಭಾಷಿಕ ಕಸರತ್ತು ಮತ್ತು ತಾವು ನಂಬಿದ ಸಿದ್ಧಾಂತಗಳೊಂದಿಗಿನ ಬದ್ಧತೆಯಿಂದಾಗಿ ಅವರ ಬಹುತೇಕ ಕಥೆಗಳು ಕಲೆಯಾಗುವಲ್ಲಿ ಸೊರಗುತ್ತವೆ ಎನ್ನುವುದಕ್ಕ ಎಲುಗನೆಂಬ ಕೊರಚನೂ ಚವುಡನೆಂಬ ಹಂದಿಯೂ ಕಥೆ ಉತ್ತಮ ನಿದರ್ಶನವಾಗಿದೆ.

ಇನ್ನಾದರೂ ಸಾಯಬೇಕು

ಕುಂವೀಯವರ 'ಇನ್ನಾದರೂ ಸಾಯಬೇಕು' ಕಥೆಯು ನವ್ಯದ ಪ್ರಭಾವದಿಂದ ರೂಪುಗೊಂಡ ಕಥೆಯಾಗಿದೆ. ಕಥೆಯ ಆರಂಭದಲ್ಲಿಯೇ ಈ ಬಗೆಗೆ ಸ್ಪಷ್ಟತೆ ದೊರೆಯುತ್ತದೆ.

> **ಈಗ ನಾನು ಬಳ್ಳಾರಿಯಲ್ಲಿಳಿದಿರೋದು ಜೇಬಿನಲ್ಲಿರೋ ಐದುನೂರು ರೂಪಾಯಿ ಜಂ ಅಂತ ಖರ್ಚ್ ಮಾಡಿ ಇಪ್ಪತ್ನಾಲ್ಕನೇ ಗಂಟೆಯ ಕೆಲವು ನಿಮಿಷಗಳಲ್ಲಿ ಗೊಟಕ್ ಎಂದು ಸತ್ತು ಹೋಗಲಿಕ್ಕಾಗಿ. ಬದುಕಿದ್ದರೆ ಆ ಹುಡುಗಿ ಮಾಡ್ಕೊಳ್ಳೋ... ಮತ್ತು ಈ ಹುಡುಗಿ ಮಾಡ್ಕೊಳ್ಳೋ... ವರದಕ್ಷಿಣೆ ಅಷ್ಟುಸಾವ್ರ, ಇಷ್ಟುಸಾವ್ರ ಎಂದು ಮಾರಾಟಕ್ಕೆ ಹಚ್ಚೋ ಅಪ್ಪ ಪ್ರಾಣ ಬಿಟ್ರೂ ಜಾತಿ ಬಿಡಬಾರ್ದೋ ಎಂದು ಕರಾರುವಕ್ಕಾಗಿ ಧರ್ಮೋಪದೇಶ ಮಾಡುವ ಅಜ್ಜಿ, ಇಂತೋರೆಲ್ಲ ದಿನಕ್ಕಿಷ್ಟು ಸಾಯಿಸುತ್ತಾರೆ. ಎಲ್ಲರ ಥರ ಬದುಕಿದ್ದರೆ ಅದೊಂದು ಬಯಕೀ ಎಂಬ ಸಿದ್ಧಾಂತ ನಂದು. ಕೆಲವರ ಮೂಗಿನ ನೇರಕ್ಕೇ ಬದುಕನ್ನು ತಿದ್ದಿಕೊಳ್ಳುವುದೇನೆಂದರೆ ನನ್ನ ಅಸ್ತಿತ್ವದ ಜುಟ್ಟವನ್ನು ಇನ್ನೊಬ್ಬರ ಮುಷ್ಟಿಗೆ ಒಪ್ಪಿಸುವುದು ಎಂದರ್ಥ, ನನ್ನ ಬದುಕಿನ ವೈಯಕ್ತಿಕ ನಿಲುವುಗಳೇನು ಎಂಬುದು ಇನ್ನು ಸ್ಪಷ್ಟವಾಗಿ ನಿರ್ಧರಿತ ವಾಗಿಲ್ಲದಿರುವುದೇ ಸಾವಿನ ಸೌಂದರ್ಯ ದ್ವಿಗುಣವಾಗಲಿಕ್ಕೆ ಸಾಧ್ಯವಾಗಿದೆ. ಮಾನವನ ಪರಿಸರವನ್ನು ಅರ್ಥ ಶೋಧಿಸುವುದೇ ಒಂದು ಮೂರ್ಖತನ ಎಂಬ ಅರಿವು ನನಗೆ ಇತ್ತೀಚಿನ ದಿನಗಳಲ್ಲಿ ಆಗಿರುವುದರಿಂದ ಒಂದೆರಡು ಮೊಳದಷ್ಟು ನೆಲಕ್ಕಿಳಿದಿರುವ ನನ್ನ ಬೇರುಗಳನ್ನು ಕಿತ್ತುಕೊಂಡು ಇಲ್ಲವಾಗುವುದು, ಅಥವಾ ಕೆಲವರ ಎದೆಯಲ್ಲಿ ಪೇಲವ ನೆನಪಿನ ಅವಶೇಷ ವಾಗುವುದು, ಅಥವಾ ನನ್ನ ಮನಸ್ಸನ್ನು ಮೃಗಾಲಯವಾಗಿ ಪರಿರ್ತಿಸಿದ ನನ್ನನ್ನು ಹುಟ್ಟಿಸಿ ಪಳಗಿಸುವಲ್ಲಿ ಅಸಮರ್ಥರಾದ ನನ್ನ ಜನರಿಗೆ ನನ್ನ ಸ್ವಯಂಕಲ್ಪಿತ ಅಕಾಲಿಕ ಸಾವಿನಿಂದ ದಿಗ್ಭ್ರಮೆಗೊಳಿಸುವುದು ಅಥವಾ ನನ್ನ ಹಾಗೆ ಕೇವಲ ಹಾಸಿಗೆಗಳಾಗಿ ಬದುಕತ್ತಾ ಎಲ್ಲಾ ಕಲೆ ಗುರ್ತುಗಳಿಗೆ ಅಧೀನರಾಗಿ ನಿರ್ಲಿಂಗವಾಗುತ್ತಿರುವ ಗೆಳೆಯರಿಗೆ ನನ್ನ ಸಾವು ಶಾಕ್ ಟ್ರೀಟ್‌ಮೆಂಟ್ ಕೊಡಬಹುದೆಂಬ ದೃಷ್ಟಿಯಿಂದ, ಅಥವಾ ನನ್ನನ್ನು ಪ್ರೀತಿಸಿದಂತೆ ನಟಿಸಿ ತಮ್ಮ ತುಟಿಗೆಲ್ಲಾ ಕಣ್ಣು ಟೊಂಕಗಳೆಂಬ ಆಳೆತ್ತರದ ಬೇಲಿಯನ್ನು ನನ್ನ ಮೆದುಳಿನಂಗಳದಲ್ಲಿ ಬೆಳೆಸಿ ದೂರ ಸರಿದು ಹೋಗಿರುವ ಗಿರಿಜಾ, ರಮಾ, ಸುಷ್ಮಾ, ಕಮಲೀ, ಶಾಲಿನಿಯರಂತಹ ಸುಂದರ ಉಷ್ಟಪಕ್ಷಿಗಳನ್ನು ಪಶ್ಚಾತ್ತಾಪಡಿಸುವ ದೃಷ್ಟಿಯಿಂದ ನಾನು ಸಾವನ್ನು ಒಳಗೊಳ್ಳುತ್ತಿರುವೆ".**

ಎಂದು ನಿರೂಪಕರು ಸಾಯುತ್ತಿರುವುದಕ್ಕೆ ಕಾರಣಗಳನ್ನು ನೀಡುತ್ತಾರೆ. ಬದುಕಿನ ಅಸಂಗತತೆಯ ಕುರಿತು ವಿಶ್ಲೇಷಿಸುತ್ತಲೇ ಸಾಯಬೇಕೆಂದರೂ ಆಗದೆ ಮದ್ಯ ಸೇವಿಸಿ ವೇಶ್ಯೆಯೊಂದಿಗೆ ಮಲಗಿ ಅನಂತರ ಸಾಯಲು ಕಾರಣಗಳನ್ನು ಚೀಟಿಯಲ್ಲಿ ಬರೆದಿಟ್ಟು ಮರುದಿನ ಆ ಚೀಟಿಯನ್ನೇ ಆಶ್ಚರ್ಯದಿಂದ ನೋಡಿ ಇಷ್ಟೊತ್ತಿಗೆ ಊರಿಗೆ ಹೋಗಿದ್ದರೆ ಚೆನ್ನಾಗಿತ್ತೆಂದು ಸೂಟ್‌ಕೇಸ್ ಹಿಡಿದು ಹೊರಡುತ್ತಾರೆ ನಿರೂಪಕರು.

ಕಥೆ ಹೇಳೋ ಕರಿಯಜ್ಜ

ಕಥೆಯ ವಸ್ತು ಕರಿಯನೆನ್ನುವವನು ಯುವಕನಾಗಿದ್ದಾಗಿನಿಂದಲೂ ಕಥೆ ಹೇಳುತ್ತಾ ಬೆಳೆಯುತ್ತಾನೆಂಬುದಾಗಿದೆ. ಅವನ ಕಥೆಗಳು ಹಳ್ಳಿಯವರನ್ನು ಮಾತ್ರವಲ್ಲದೆ ಸುತ್ತಮುತ್ತಲ ಹಳ್ಳಿಗಳಲ್ಲೂ ಪ್ರಚಾರ ಪಡೆದು ಹೊಸರೂಪ ಪಡೆದುಕೊಳ್ಳುತ್ತಿದ್ದವು. ಮೌಖಿಕ ಪರಂಪರೆಯ ಸ್ವರೂಪವೇ ಆಗಿರುತ್ತದೆ. ಹೀಗೆ ಕಥೆ ಹೇಳುತ್ತಿದ್ದ ಕರಿಯಜ್ಜ ತನ್ನ ಕಥೆಗಳ ಮೂಲಕ ಹಲವರ ಸಮಸ್ಯೆ ರೋಗಗಳನ್ನು ಗುಣಪಡಿಸುತ್ತಿದ್ದನು. ಊರ ಗೌಡನು ಗಂಡನನ್ನು ಬಿಟ್ಟು ಬಂದಿರುವ ತನ್ನ ಮಗಳ ಸಂಸಾರವನ್ನು ಸರಿಪಡಿಸಬೇಕೆಂದು ಹಾಗೆ ಸರಿಪಡಿಸಿದರೆ ಮನೆ ಮಗನನ್ನಾಗಿ ನೋಡಿಕೊಳ್ಳು ತ್ತೇನೆಂದು ಹೇಳುತ್ತಾನೆ. ಕರಿಯಜ್ಜ ಅವಳ ಸಮಸ್ಯೆಯನ್ನು ಸರಿಪಡಿಸುತ್ತಾನೆ. ನಂತರ ಕರಿಯ ಕರಿಯಜ್ಜನಾಗಿ ಬೆಳೆಯುತ್ತಿರುವ ಕಲ್ಲೆಂದು ನಂಬಲಾಗುತ್ತಿರುವ ದೈವಂಶದ ಕಲ್ಲೊಂದರ ಬಳಿ ಜೋಪಡಿ ಕಟ್ಟಿಕೊಂಡು ಇರುತ್ತಾನೆ. ಆವಾಗಿಂದ ಆ ಕಲ್ಲು ತನ್ನ ಬೆಳೆವಣಿಗೆಯನ್ನು ನಿಲ್ಲಿಸುತ್ತದೆ. ಬರುಬರುತ್ತಾ ಅವನೊಳಗಿನ ಕಥೆಗಳು ಹೊರಬರಲಾರದೆ

‘‘ಒಂದರ ಮೇಲೆ ಒಂದರಂತೆ ಬಿದ್ದು ಒದ್ದಾಡುತ್ತಿರುವವೇ.... ನವರಂಧ್ರಗಳೆಲ್ಲ ಕಿಲುಬಿ ಜಡ್ಡು ಹಿಡಿದು ಮುಚ್ಚಿದ್ದರಿಂದ ಆಯುವ ಕಥೆಗೂ ಒಂದು ಹೆಜ್ಜೆಕಿತ್ತು ಇಡಲಾಗಲಿಲ್ಲ. ಅಂತರಂಗವೆಂಬೋ ಅಂತರಂಗ ಜಲಿಯನ್ ವಾಲ್‌ಬಾಗ್‌ನಂತೆ... ಅದಕ್ಕಿದ್ದ ಒಂದೇ ದ್ವಾರದ ತುಂಬಾ ಜನರಲ್ ಡಯರ್ ಮಾರಾಕಾಸ್ತ್ರಗಳೊಂದಿಗೆ ನಿಂತಿರುವಂತೆ... ಯಾವ ಕ್ಷಣದಲ್ಲಿ ಏನಾಗಿಬಿಡುವುದೋ... ಆತಂಕದ ದಟ್ಟಛಾಯೆ... ವಿಛಿತ್ರ ಧಗೆ... ಸೆಕೆ... ಪ್ರಾಣವಾಯುವಿನ ಕೊರತೆ... ಸಾಮೂಹಿಕವಾಗಿ ಬೇಯುತ್ತಿರುವ ಕಥೆಗಳು, ಎಲ್ಲೆಲ್ಲೂ ರಾರಾಜಿಸುತ್ತಿರುವ ಪ್ರಶ್ನಾರ್ಥಕ ಚಿಹ್ನೆ..’’ ಹೀಗೆ ಕಥೆಗಳು ಹೊರಬರಲಾರದೆ ಒಳಗಡೆಯೇ ದಾಂಗುಡಿ ಇಡುತ್ತಿದ್ದವೆಂದು ನಿರೂಪಿಸಲಾಗಿದೆ. ನಂತರ ಕುಂವೀ ಅವರು ಸಾಂಕೇತಿಕವಾಗಿ ಕಥೆಯನ್ನು ಮುಕ್ತಾಯಗೊಳಿಸುತ್ತಾರೆ.

ಕಥೆಗಾರ ಎಂದೂ ಹೀಗೆ ವರ್ತಿಸಿದವನಲ್ಲ. ಶಾರೀರಿಕವಾಗಿ ತುಂಬಾ ಕೃಷಗೊಂಡಿರುವ ಅವನ ವಿರುದ್ಧ ಯಾವುದೇ ಪಂಚೇಂಧ್ರಿಯಗಳು, ನವರಂಧ್ರಗಳು ಕ್ಯಾತೆ ತೆಗೆದಿರಬಹುದೇ ಎಂಬ ಸಂದೇಹ ವ್ಯಕ್ತಪಡಿಸಿದವು. ಕೆಲವು ಕಾಲಕ್ಕನುಗುಣವಾಗಿ ಅವೇನಾದರೂ ಸುಂಕ ಬಯಸಿ ಕರ್ತವ್ಯಕ್ಕೆ ಬೆನ್ನು ಮಾಡಿರಬಹುದೇ ಎಂದು ತರ್ಕಿಸಿದವು. ಮಾರ್ಗಗಳನ್ನು ಒಂದು ಕೈವಿಚಾರಿಸಿಕೊಂಡು ಬಿಡುವುದೆಂದು ನಿರ್ಧರಿಸಿ ಅವೆಲ್ಲ ಗುಂಪುಗುಂಪಾಗಿ ಕೆಲವು ಪಂಚೇಂಧ್ರಿಯಗಳ ಕಡೆಗೂ; ಕೆಲವು ನವರಂಧ್ರಗಳ ಕಡೆಗೂ ಹೋದವು. ಯಾವ ಸಂಘಟನೆ ವ್ಯಾಪ್ತಿಯಲ್ಲಿರದಿದ್ದ ಚಿಲ್ಲರೆಪಲ್ಲರೆ ಕಥೆಗಳು ಕರಿಯಜ್ಜನ ಸ್ವೇದರಂಧ್ರಗಳ ಮೂಲಕ ಕನ್ನಕೊರೆಯುವ ಪ್ರಯತ್ನಕ್ಕಿಳಿದವು. ಅಂತರಂಗದ ಸಮಸ್ತ ಕಥೆಗಳ ನಿರ್ವಿರಾಮದ ಒತ್ತಡದಿಂದಾಗಿ ಕರಿಯಜ್ಜ ಕ್ಷಣದಿಂದ ಕ್ಷಣಕ್ಕೆ ಪಳುಗಟ್ಟೆಗೆ ಬೇರಿಳಿಬಿಡುತ್ತಲೇ ಇದ್ದ. ಶೂನ್ಯದ ಕಡೆ ದೃಷ್ಟಿ ನೆಟ್ಟಿರುವಂತೆಯೇ ಇತ್ತು. ಅವನು ಬದುಕಿದನೋ! ಸತ್ತಿದ್ದನೋ!

ಕಥೆ ಹೇಳುವ ಕರಿಯಜ್ಜ ಮತ್ತು ಅವನು ತನ್ನ ಕಥೆಗಳಿಂದ ಹಲವರ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದ ಮುಂತಾದ ಒಂದು ಸಣ್ಣ ಎಳೆಯೊಂದರ ಮೂಲಕ ಕಥೆ ಪ್ರಾರಂಭಿಸಿ ವಿವರಗಳನ್ನು ಎಳೆದಾಡುತ್ತಾ ಆಡುನುಡಿಯ ಭಾಷಿಕ ಕಸರತ್ತು ನಡೆಸುತ್ತಾ ಹರಟೆಯ ಮಟ್ಟದಲ್ಲೇ ಉಳಿದುಬಿಡುವ ಅಪಾಯದಿಂದ ಈ ಕಥೆಯು ಪಾರಾಗಿಲ್ಲ. ಕುಂವೀ ಅವರ ಬಹುತೇಕ ಕಥೆಗಳೆಲ್ಲ ಈ ಬಿಕ್ಕಟ್ಟಿನಿಂದ ಪಾರಾಗಿಲ್ಲವೆನ್ನಬಹುದು. ಕಥೆಯಲ್ಲಿನ ಘಟನೆ, ಮತ್ತೊಂದು ಘಟನೆ ಹೀಗೆ ಒಂದಕ್ಕೊಂದು ಬೆಳೆಯುವ ಪೂರಕ ಕ್ರಿಯೆಯಾಗದೆ ಕಥನಕ್ರಿಯೆಯು ಯಾವ ಹೊಸ ಆಯಾಮವನ್ನು ಗಳಿಸಿಕೊಳ್ಳಲಾಗದೆ ಹರಟೆಯ ಮಟ್ಟದಲ್ಲೇ ಅಥವಾ ಪ್ರಬಂಧವೊಂದರ ಹಂತದಲ್ಲೇ ನಿಂತುಬಿಡುವ ಅಪಾಯದಿಂದ ಇಲ್ಲಿನ ಕಥೆಗಳು ಪಾರಾಗಿಲ್ಲವೆಂದು ಹೇಳಬಹುದು.

ಪರಾಮರ್ಶನ ಗ್ರಂಥಗಳು

1. ಅನಾಥ ಪಕ್ಷಿಯ ಕಲರವ, ವೀರಭದ್ರಪ್ಪ ಲೋಹಿಯಾ ಪ್ರಕಾಶನ ಬಳ್ಳಾರಿ 1997.
2. ಬರೀ ಕಥೆಯಲ್ಲೋ ಅಣ್ಣಾ, ಕುಂ.ವೀರಭದ್ರಪ್ಪ ಸಿ.ವಿ.ಜಿ ಪಬ್ಲಿಕೇಷನ್ ಬೆಂಗಳೂರು 2004
3. ಹೊಸಗನ್ನಡ ಸಾಹಿತ್ಯ ಚರಿತ್ರೆ ಶೇಷಗಿರಿರಾವ್ ಎಲ್.ಎಸ್. ಅಂಕಿತಾ ಪ್ರಕಾಶನ ಬೆಂಗಳೂರು 2002.